ನ್ಯಾಯಾಲಯ ಸ್ಥಾಪನೆ.
(52): 286

ಶ್ರೀ ನಂದೀಶ್ ರೆಡ್ಡಿ ಎನ್.ಎಸ್. (ಕೆ.ಆರ್.ಪುರಂ)

ಅ) ಕೃಷ್ಣರಾಜಪುರದಲ್ಲಿ ನೂತನವಾಗಿ ನ್ಯಾಯಾಲಯ ಸ್ಥಾಪನೆ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ಒದಗಿಸುವುದು)

ಆ) ಹಾಗಿದ್ದಲ್ಲಿ ಇದುವರೆವಿಗೂ ನ್ಯಾಯಾಲಯ ಸ್ಥಾಪಿಸಲು ಕೈಗೊಂಡಿರುವ ಕ್ರಮವೇನು? (ವಿವರ ಒದಗಿಸುವುದು)

ಇ)ನ್ಯಾಯಾಲಯ ಸ್ಥಾಪನೆಗೆ ಸರ್ಕಾರವು ಈ ಹಿಂದೆ ಅಧಿಸೂಚನೆ ಹೊರಡಿಸಿದಾಗ್ಯೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು;(ವಿವರ ಒದಗಿಸುವುದು)

ಈ) ನ್ಯಾಯಾಲಯ ಸ್ಥಾಪನೆಗೆ ಸರ್ಕಾರ ಅವಶ್ಯಕ ಅನುದಾನ ಮಂಜೂರು ಮಾಡಿ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಸುರೇಶ್ ಕುಮಾರ್ : ಮಾನ್ಯ ನಗರಾಭಿವೃದ್ಧಿ ಮತ್ತು ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು.

ಅ) ಬಂದಿದೆ, ಬೆಂಗಳೂರು ಪೂರ್ವ ತಾಲ್ಲೂಕು, ಕೃಷ್ಣರಾಜಪುರದಲ್ಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯವನ್ನು ಸ್ಥಾಪಿಸಲು ಸರ್ಕಾರದ ಆದೇಶ ಸಂಖ್ಯೆ: ಲಾ 12ಎಲ್‌ಸಿಇ 2002, ದಿನಾಂಕ 02.12.2003 ರಲ್ಲಿ ಈಗಾಗಲೇ ಮಂಜೂರಾತಿ ನೀಡಿದೆ.

ಆ)ಈ ನ್ಯಾಯಾಲಯ ಸ್ಥಾಪಿಸಲು ಐ.ಟಿ.ಐ. ಕಟ್ಟಡವನ್ನು ನೀಡದ ಕಾರಣ, ಈ ನ್ಯಾಯಾಲಯದ ಕಟ್ಟಡ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿಕೃಷ್ಣರಾಜಪುರದಲ್ಲಿ ಸೂಕ್ತ ಜಾಗವನ್ನು ಗುರುತಿಸಲು ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಇವರ ಕಛೇರಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಿಗೆ ದಿನಾಂಕ: 18.01.2013 ರಂದು ಪತ್ರವನ್ನು ಬರೆಯಲಾಗಿದೆ.

ಇ) ಸೂಕ್ತ ಕಟ್ಟಡವಿಲ್ಲದ ಕಾರಣ ಈ ನ್ಯಾಯಾಲಯವು ಇದುವರೆವಿಗೂ ಕಾರ್ಯ ನಿರ್ವಹಿಸುತ್ತಿಲ್ಲ.

ಈ) ಸರ್ಕಾರದ ಆದೇಶ ಸಂಖ್ಯೆ.ಲಾ 12 ಎಲ್‌ಎಸಿ 2002, ದಿನಾಂಕ: 02.12.2003 ರಲ್ಲಿ ಈ ನ್ಯಾಯಾಲಯದ ಸ್ಥಾಪನೆಗೆ ತಗಲುವ ವೆಚ್ಚ ರೂ.26,33,120.00 ಗಳನ್ನು ಮಂಜೂರು ಮಾಡಲಾಗಿತ್ತು. ಆದಾಗ್ಯೂ, ಆರ್ಥಿಕ ಇಲಾಖೆಯೊಡನೆ ಸಮಾಲೋಚಿಸಿ ಅವಶ್ಯಕ ಅನುದಾನ ಮಂಜೂರು ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎನ್.ಎಸ್. ನಂದೀಶ್ ರೆಡ್ಡಿ : ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಪ್ರಥಮವಾಗಿ ವಂದನೆಗಳನ್ನು ತಿಳಿಸುತ್ತಾ, ಸಾಕಷ್ಟು ಕಂದಾಯ ಇಲಾಖೆಯ ಜಾಗ ನಮ್ಮ ಕ್ಷೇತ್ರದಲ್ಲಿ ಲಭ್ಯವಿದೆ. ಸೂಕ್ತವಾದ ಜಾಗವನ್ನು ಶೀಘ್ರವಾಗಿ ಪರಿಶೀಲಿಸಿ ಈ ಒಂದು ನ್ಯಾಯಲಯದ ಕಟ್ಟಡ 2003 ರಿಂದ ಕಟ್ಟಲಿಕ್ಕೆ ಬಾಕಿ ಇರತಕ್ಕಂಥದು ಅದಕ್ಕೆ ಅತಿ ಶೀಘ್ರದಲ್ಲಿ ಚಾಲನೆ ನೀಡಬೇಕೆಂದು ತಮ್ಮ ಮೂಲಕ ಸಚಿವರನ್ನು ಹಾಗೂ ಸರ್ಕಾರವನ್ನು ಮನವಿ ಮಾಡುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಸೂಕ್ತವಾದ ಜಾಗವನ್ನು ಗುರುತಿಸಲಿಕ್ಕೆ ನಾವು ಈಗಾಗಲೇ ಆ District Judge ನವರಿಗೆ ಹೇಳಿದ್ದೇವೆ. ಅವರು ಕಂದಾಯ ಇಲಾಖೆಯವರ ಹತ್ತಿರ ಮಾತನಾಡಿ ಸೂಕ್ತವಾದ ಜಾಗವನ್ನು ನಾವು ತೆಗೆದುಕೊಂಡು ಕೋರ್ಟ್ ಅನ್ನು ಪ್ರಾರಂಭ ಮಾಡುವುದಕ್ಕೆ ಎಲ್ಲಾ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಶ್ರೀ ಸಿ.ಬಿ. ಸುರೇಶ್‌ಬಾಬುರವರು ಹಾಜರಿಲ್ಲ. ಡಾ.ಎ.ಬಿ.ಮಾಲಕರೆಡ್ಡಿಯವರು ಪ್ರಶ್ನೆ ಕೇಳುವುದು.

ರಾಜ್ಯದಲ್ಲಿ ಸುಪ್ರೀಂಕೊರ್ಟ್ ಪೀಠ ಸ್ಥಾಪನೆ.

ಡಾ ॥ ಮಾಲಕ ರೆಡ್ಡಿ ಎ.ಬಿ.(ಯಾದಗಿರಿ)

(54) 131

ಅ) ಸರ್ವೋಚ್ಚ ನ್ಯಾಯಾಲಯದ ಪೀಠವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ರಾಜ್ಯ ಸರ್ಕಾರ ಕೇಂದ್ರದ ಗಮನ ಸೆಳೆದಿದೆಯೇ (ಸಂಪೂರ್ಣ ಮಾಹಿತಿ ನೀಡುವುದು)

ಆ) ವಿವಿಧ ಪ್ರಕರಣಗಳಲ್ಲಿ ರಾಜ್ಯದಿಂದ ಅಂತಿಮ ನ್ಯಾಯಕ್ಕಾಗಿ 2010–11, 2011–12, 2012–13 ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾದ ಅರ್ಜಿಗಳ ಸಂಖ್ಯೆ ಎಷ್ಟು?